

ಚೀನಾದಿಂದ ತರಿಸಿದ ಟೈಲ್ಸ್; ತರಕಾರಿ ಸಂಸ್ಕರಿಸಿ ಪಡೆದ ಬಣ್ಣದ ಚಿತ್ರಗಳು

ಅಳವಡಿಸಲಾದ ಅಲಂಕೃತ ದೀಪಗಳು ಸಭಾಂಗಣಕ್ಕೆ ಮೆರುಗು ಕೊಡುತ್ತವೆ. ಆಗೆಲ್ಲ ತೆಂಗಿನ ಎಣ್ಣೆಯನ್ನು ದೀಪ ಜ್ವಲಿಸಲು ಬಳಸಲಾಗುತ್ತಿತ್ತು ಎನ್ನಲಾಗಿದೆ.

ನಿಂತ ನೆಲದ ಮೇಲೆ ಕಣ್ಣಾಡಿಸಿದರೆ ಬಗೆಬಗೆಯ ಚಿತ್ರಗಳು ಕಾಣಿಸುತ್ತವೆ. ಒಂದರಂತೆ ಇನ್ನೊಂದು ಟೈಲ್ಸ್ ಇಲ್ಲ. ಪೋರ್ಸಲೀನ್‌ನಿಂದ ತಯಾರಿಸಿದ ಈ ಟೈಲ್ಸ್‌ಗಳನ್ನು ಚೀನಾದಿಂದ ತರಿಸಿ ಅಳವಡಿಸಲಾಗಿದೆ. ಇವುಗಳ ಮೇಲೆ ತರಕಾರಿಯಿಂದ ಸಂಸ್ಕರಿಸಿದ ಬಿಳಿ ಮತ್ತು ನೀಲಿ ಬಣ್ಣ ಬಳಸಿ ಚಿತ್ರಗಳನ್ನು ರಚಿಸಲಾಗಿದೆ. ಇಡೀ ನೆಲಹಾಸಿನಲ್ಲಿರುವ 1100 ಟೈಲ್‌ಗಳು ಒಂದಕ್ಕಿಂತ ಒಂದು ಚೆಂದ!

ಪ್ರಾರ್ಥನಾ ಸಭಾಂಗಣದ ಎದುರು ಮಧ್ಯಮ ವಿಸ್ತಾರದ ಅಟ್ಟಣಿಗೆ ಕಟ್ಟಲಾಗಿದ್ದು, ಇದು ಮಹಿಳೆಯರು ಕೂತುಕೊಳ್ಳಲು ಮೀಸಲು. ಇದನ್ನು 'ಎರಡನೇ ಬಿಮಾಹ್' ಎನ್ನುತ್ತಾರೆ. ಮಹಿಳೆಯರು ಹಬ್–ಪೂಜೆಗಳನ್ನು ಹತ್ತಿರದಿಂದ ನೋಡಲು ಅವಕಾಶ ಇರುವುದೇ ಕೊಚಿನ್‌ನಲ್ಲಿರುವ ಸಿನೆಗಾಗ್ ವೈಶಿಷ್ಟ್ಯ.

2018ರಲ್ಲಿ ಸಿನೆಗಾಗ್‌ನ 450ನೇ ಸ್ಥಾಪನಾ ಮಹೋತ್ಸವ ನಡೆಯಿತು. ಅವತ್ತು ಇಸ್ರೇಲ್, ಅಮೆರಿಕ, ಕೆನಡಾ, ಆಸ್ಟ್ರೇಲಿಯಾ, ಇಂಗ್ಲೆಂಡಿನಿಂದ ನೂರಾರು ಯಹೂದಿಯರು ಬಂದಿದ್ದರು. ಅವರ ಪೂರ್ವಜರು ಇಲ್ಲೇ ಇದ್ದವರು!

### ಈಗಲೂ 'ಡಣ್ ಡಣ್'

ಸಂಜೆಯ ಹೊತ್ತು ಹೊಂಬೆಳಕಲ್ಲಿ ಸಿನೆಗಾಗ್ ನೋಡುವುದರಲ್ಲಿ ಮಗ್ನರಾಗಿದ್ದಾಗ, ಅಲ್ಲಿದ್ದ ಯಹೂದಿಯರ ಕುಟುಂಬವೊಂದು ಲಗುಬಗೆಯಿಂದ ಏನನ್ನೋ ಹೇಳುತ್ತ ಹೊರಗೆ ಹೋಯಿತು. ಅವರ ಮಾತು ಕೇಳಿ, ಇನ್ನಷ್ಟು ಜನರು ಹೊರಗೆ ಧಾವಿಸಿದರು. ತುಸು ಗೊಂದಲದಿಂದ ವಿಚಾರಿಸಿದಾಗ, ಅದಾಗಲೇ ಆರು ಗಂಟೆ. ಸಿನೆಗಾಗ್ ಭೇಟಿ ಸಮಯ ಮುಗಿಯಿತೇ ಎಂದು ಅಲ್ಲಿದ್ದ ಪರಿಚಾರಕನನ್ನು ಕೇಳಿದಾಗ, 'ಹಾಗಲ್ಲ, ಹೊರಗಿನ ಗಡಿಯಾರ ಗಂಟೆ ಬಾರಿಸಲಿದೆ' ಎಂದ. ನಾವೂ ಅವರ ಹಿಂದೆಯೇ ಓಡಿದೆವು.

ಸಿನೆಗಾಗ್‌ನ ಮುಂಭಾಗದಲ್ಲಿ ಸುಮಾರು 45 ಅಡಿ ಎತ್ತರದ ಗೋಪುರವಿದ್ದು, ಇದನ್ನು ಯಹೂದಿ ಉದ್ಯಮಿ ಇಜ಼ೆಕಾಯ್ ರಹಾಬಿ 1760ರಲ್ಲಿ ನಿರ್ಮಿಸಿದ. ಮಧ್ಯಭಾಗದಲ್ಲಿ ಗಡಿಯಾರ ಅಳವಡಿಸಿದ್ದು, ಮೂರು ಕಡೆ 'ಡಯಲ್ ಬೋರ್ಡ್'ನಲ್ಲಿ ಸಮಯ ವೀಕ್ಷಿಸಬಹುದು. ಜೆರುಸಲೇಮ್ ಕಡೆಗೆ ಮುಖ ಮಾಡಿರುವ ಡಯಲ್ ಹಿಬ್ರೂ (ಯಹೂದಿ ಭಾಷೆ) ಸಂಖ್ಯೆಯನ್ನು ಹೊಂದಿದೆ. ಮಟ್ಟಂಚೆರಿ ಅರಮನೆಗೆ ಎದುರಾದ ಡಯಲ್‌ನಲ್ಲಿ ಮಲೆಯಾಳಂ ಅಂಕಿಯೂ ಇನ್ನೊಂದು ಕಡೆ ರೋಮನ್ ಸಂಖ್ಯೆಯೂ ಇವೆ. ನಾಲ್ಕನೇ ಮುಖ ಕಡಲಿನ ಕಡೆ ಇದ್ದು, ಅದು ಖಾಲಿ! ಅರಮನೆಯಲ್ಲಿನ ರಾಜಪರಿವಾರ, ಸ್ಥಳೀಯರು ಹಾಗೂ ಯಹೂದಿ ವ್ಯಾಪಾರಿಗಳಿಗೆ ಸಮಯ ತಿಳಿಸುತ್ತಿದ್ದ ಈ ಗಡಿಯಾರದ ವಿಶೇಷವೆಂದರೆ, ಇನ್ನೂರೈವತ್ತು ವರ್ಷವಾದರೂ ಪ್ರತಿ ತಾಸಿಗೆ ಕರಾರುವಕ್ಕಾಗಿ ಬಾರಿಸುವ ಗಂಟೆ! ಗಡಿಯಾರದ ಮೇಲಿನ ಕಿರುಮಹಡಿಯಲ್ಲಿ ಗಂಟೆ ವ್ಯವಸ್ಥೆ ಅಳವಡಿಸಲಾಗಿದೆ. ಡಯಲ್‌ನಲ್ಲಿರುವ ನಿಮಿಷದ ಮುಳ್ಳು 12ಕ್ಕೆ ಸಮೀಪಿಸುವಂತೆ ಸಿನೆಗಾಗ್ ಹೊರಗೆ ಜನರು ಬಂದು ನಿಂತು ಗಂಟೆ ಹೊಡೆಯುವ ಪ್ರಕ್ರಿಯೆಯನ್ನು ಕೌತುಕದಿಂದ ವೀಕ್ಷಿಸುತ್ತಾರೆ.

ಪೋರ್ಚುಗೀಸರು, ಡಚ್ಚರು, ಯಹೂದಿಗಳಿಂದ ಹಿಡಿದು ಈಚಿನ ಬ್ರಿಟಿಷರು ಹಾಗೂ ಟಿಪ್ಪು ಸುಲ್ತಾನ್‌ನವರೆಗೂ ಕೊಚಿನ್ ಹೋರಾಟದ ಕೇಂದ್ರವಾಗಿಯೇ ಇತ್ತು. ಇದರಿಂದಾಗಿ ಕೊಚಿನ್ ಅನ್ನು 'ಯೂರೋಪಿನ ರಣರಂಗ' ಎಂದು ಬಣ್ಣಿಸಲಾಗುತ್ತದೆ. ಒಂದರ ಹಿಂದೊಂದು ಸಮುದಾಯಗಳು ದಾಳಿ ಮಾಡುತ್ತ, ಈ ಬಂದರು ನಗರವನ್ನು ವಶಪಡಿಸಿಕೊಳ್ಳುತ್ತ ಇಡೀ ಪ್ರದೇಶ ಆತಂಕದ ನೆರಳಿನಲ್ಲೇ ಇರುವಂತೆ ಮಾಡಿದ್ದವು. ಮೈತುಂಬ ಗಾಯದ ಗುರುತುಗಳನ್ನು ಉಳಿಸಿಕೊಂಡ ಸಾಗರ ತಟದ ಪಟ್ಟಣ, ಸ್ವಾತಂತ್ರ್ಯಾನಂತರ ತುಸು ನಿರಾಳವಾಗಿ ಉಸಿರಾಡಿತು. ಅದರಲ್ಲೂ ಕಳೆದ ಎರಡೂವರೆ ದಶಕಗಳಲ್ಲಿ ಮೈಕೊಡವಿಕೊಂಡು ಎದ್ದು ನಿಂತು ಆಧುನಿಕತೆಗೆ ಸಂಪೂರ್ಣವಾಗಿ ತೆರೆದುಕೊಂಡಿದೆ.

ವರ್ಷಾಂತ್ಯದ ಹೊತ್ತಿನಲ್ಲಿ ನಾವು ಕೊಚಿನ್‌ನಲ್ಲಿ ಇದ್ದೆವು. ಮೋಜು ಮಸ್ತಿಗೆಂದು ಬಂದ ವಿದೇಶಿಗರಿಂದ ಆ ನಗರ ತುಂಬಿ ತುಳುಕುತ್ತಿತ್ತು. ಜ್ಯೂ ಟೌನಿನಲ್ಲಿ ಸುತ್ತಾಡಿ, ಪರದೇಸಿ ಸಿನೆಗಾಗ್ ನೋಡುತ್ತಿರುವಾಗ ಅಲ್ಲಿಗೆ ಬಂದಿದ್ದ ಇಸ್ರೇಲಿನ ಕುಟುಂಬವೊಂದು ಮಾತಿಗೆ ಸಿಕ್ಕಿತು. 'ಕನಿಷ್ಠ ಎರಡು ವರ್ಷಕ್ಕಾದರೂ ಒಮ್ಮೆ ಇಲ್ಲಿಗೆ ಬರುತ್ತೇವೆ. ಇದು ಇಲ್ಲಿಗೆ ಎಂಟನೇ ಭೇಟಿ' ಎಂದು ಟೆಲ್ ಅವಿವ್ ನಿವಾಸಿ ಯೊಹವಾ ಹೇಳಿದರು. 'ಒಂದೆರಡು ಸಲ ಸರಿ. ಪದೇ ಪದೇ ಯಾಕೆ' ಎಂಬ ನಮ್ಮ ಪ್ರಶ್ನೆಗೆ, 'ನಮ್ಮ ಪೀಳಿಗೆಯ ಬೇರುಗಳು ಇರುವುದೇ ಇಲ್ಲಿ! ನಾಲ್ಕು ಪೀಳಿಗೆಯ ಹಿಂದೆ ನಮ್ಮ ಅಜ್ಜ ಇಲ್ಲಿ ವ್ಯಾಪಾರಿಯಾಗಿದ್ದ' ಎಂದು ಸಂಶಯ ಪರಿಹರಿಸಿದರು ಯೊಹವಾ.

ಅನಂತ ದೂರದಲ್ಲಿ ನೆಲೆಯಾದ ಕುಟುಂಬವೊಂದರ ಮೂಲ ಸೆಲೆ ಸಾಗರತೀರದ ಈ 'ಜ್ಯೂ ಟೌನ್' ಎಂಬುದನ್ನು ತಿಳಿದು, ವಿಸ್ಮಯದ ಕಡಲಲ್ಲಿ ಮಿಂದೆದ್ದ ಅನುಭವವಾಯಿತು.

ಪ್ರತಿಕ್ರಿಯಿಸಿ: feedback@sudha.co.in


